ಕ್ರಾಂತಿಯ ದಾರಿಯಲ್ಲಿ ಇದೆಲ್ಲಾ ಇರುವಂತಹದೇ ಎಂದು ಕಾಮ್ರೇಡ್ ಆಲಿ ರೈಟರು ಯಾವ ನೆಂಟರ ಮೂದಲಿಕೆಗೂ ಸೊಪ್ಪು ಹಾಕದೆ ನನ್ನ ಜೊತೆ ನಿಖಾ ಆದರೆ ಅವಳ ಆಟಗಳು ನಿಂತು ಸರಿಹೋಗುವುದು ಎಂದು ಕನಸು ಕಾಣುತ್ತಿದ್ದರು. ಅರ್ಧದಲ್ಲೇ ಕ್ರಾಂತಿಯ ದಾರಿಯನ್ನು ಬಿಟ್ಟು ಹಲವು ಅನುರಾಗಗಳ ಆಳಕ್ಕೆ ಬಿದ್ದಿದ್ದ ನಾನು ಅಲ್ಲಿಯೂ ಘಾಸಿಗೊಂಡು ಸರ್ಕಾರಿ ಉದ್ಯೋಗದ ಜೊತೆ ಕವಿತೆಯನ್ನು ಬರೆದುಕೊಂಡು ಆರಾಮವಾಗಿದ್ದೆ. ಈ ಬೆಂಕಿಯ ಚೆಂಡಿನ ಹಾಗಿರುವ ಜುಬೇದಾಳನ್ನು ಕಟ್ಟಿಕೊಂಡರೆ ನಾನು ಅಂಡು ಸುಟ್ಟುಕೊಂಡು ಅದನ್ನು ಆರಿಸುವುದರಲ್ಲೇ ಬಾಳು ಕಳೆಯಬೇಕಾಗುತ್ತದೆ ಎಂದು ಅವಳ ಮಿಂಚಿನಂತಹ ಕುಡಿನೋಟದಿಂದ ತಪ್ಪಿಸಿಕೊಳ್ಳುತ್ತಿದ್ದೆ. ಅವಳಿಗೂ ಅದೇ ಬೇಕಾಗಿತ್ತು. ಒಂದು ಬೆಳಗ್ಗೆ ಅಂತರರಾಜ್ಯ ಕ್ರೀಡಾಕೂಟಕ್ಕೆ ಹೊರಟವಳು ಜಾರ್ಖಂಡದ ಕೋಕೋ ಆಟಗಾರನೊಬ್ಬನೊಡನೆ ಓಡಿಹೋಗಿದ್ದಳು.

ಇಲ್ಲ, ಅವಳು ಓಡಿಹೋಗಿದ್ದು ಅಸ್ಸಾಮಿನಿಂದ ಕಾಫಿ ತೋಟದ ಕೆಲಸಕ್ಕೆ ಬಂದಿದ್ದ ಆದಿವಾಸೀ ವಲಸೆ ಕಾರ್ಮಿಕನೊಂದಿಗೆ ಎಂದೂ ಜನರು ಆಡಿಕೊಳ್ಳುತ್ತಿದ್ದರು. ಅವಳು ಯಾರ ಜೊತೆಗೆ ಓಡಿಹೋದಳು ಅನ್ನುವುದಕ್ಕಿಂತ ಯಾರೋ ಒಬ್ಬನ ಜೊತೆ ಓಡಿಹೋದಳಲ್ಲಾ ಎಂಬುದು ನನಗೆ ನೆಮ್ಮದಿಯಾಗಿತ್ತು.

'ಪರವಾಗಿಲ್ಲ ಕಾಮ್ರೇಡ್ ಆಲಿ ರೈಟರೇ. ನಿಮ್ಮ ರಾಜಕೀಯ ಪಾಠವನ್ನು ಅವಳು ಸರಿಯಾಗಿಯೇ ಪಾಲಿಸಿದ್ದಾಳೆ. ಈಶಾನ್ಯ ಭಾರತದಲ್ಲಿ ಕಮ್ಯುನಿಷ್ಟರ ಕೆಂಪು ಕಾರಿಡಾರು ರೆಡಿ ಆದಾಗ ನಮ್ಮ ಜುಬೇದಾ ಅಲ್ಲಿ ಕ್ರೀಡಾ ಸಚಿವೆಯಾಗುತ್ತಾಳೆ' ಎಂದು ರೇಗಿಸಿದ್ದೆ. ಅವರಿಗೆ ಸಿಕ್ಕಾಪಟ್ಟೆ ಸಿಟ್ಟು ಬಂದು ಮುಖಕ್ಕೆ ರಕ್ತ ನುಗ್ಗಿ ಬಂದಿತ್ತು.

'ನನಗೆ ಪರವಾಗಿಲ್ಲ. ಆದರೆ, ನಿನ್ನ ಅಮ್ಮಾಯಿಯನ್ನು ಸಂತೈಸುವುದು ಹೇಗೆ. ಅವಳು ಅತ್ತು ಅತ್ತು ಶವವಾಗಿ ಹೋಗಿದ್ದಾಳೆ. ನೀನೇ ಬಂದು ಸಮಾಧಾನ ಹೇಳು' ಎಂದು ಕೈಹಿಡಿದು ಕೇಳಿಕೊಂಡಿದ್ದರು. ಆದರೆ, ಈ ಅಮ್ಮಾಯಿಯನ್ನು ಸಂತೈಸುವುದು ಹೇಗೆ ಎಂದು ಧೈರ್ಯವಾಗದೆ ನಾನು ಹೋಗಿರಲಿಲ್ಲ.

ಒಂದು ವಾರ ಕಾಲ ಅತ್ತು ಅತ್ತು ಶವವಾಗಿ ಹೋಗಿದ್ದ ಅವರು ಆಮೇಲೆ ಚೇತರಿಸಿಕೊಂಡು ತಮ್ಮ ತಲೆಗೆ ಹಾಕುವ ಬಣ್ಣ ಬಣ್ಣದ ಲೇಸ್ ಬಟ್ಟೆಯಲ್ಲಿ ಆ ಟಿಫಿನ್ ಕ್ಯಾರಿಯರನ್ನು ಬಿಗಿಯಾಗಿ ಕಟ್ಟಿ ಒಂದು ನಿಟ್ಟುಸಿರಿಟ್ಟು, 'ಕೊಡಿ ಆ ಹಾಳಾದವನಿಗೆ. ಪಾಪ ತಿಂದು ಸಾಯಲಿ' ಎಂದು ಕಳಿಸಿಕೊಟ್ಟಿದ್ದರು. ನಾನು ಅದಕ್ಕಾಗಿಯೇ ಕೊಠಡಿಯ ಬಾಗಿಲ ಕಡೆ ನೋಡುತ್ತಾ ಕಾಯುತ್ತಿದ್ದೆ.

ಕಾಮ್ರೇಡ್ ಆಲಿ ರೈಟರು ಕಚೇರಿಯ ಬಾಗಿಲಿನ ದಾರಂದವನ್ನು ಬೆರಳಿಂದ ಸಣ್ಣಗೆ ತಟ್ಟಿದ ಸದ್ದು ಕ್ಷೀಣವಾಗಿ ಕೇಳಿಸಿತು. ಬೇರೆ ಯಾವಾಗಲಾದರೂ ಆಗಿದ್ದರೆ ಅವರು ಬೆರಳಿಂದ ಸಣ್ಣಗೆ ತಟ್ಟಿದರೂ ಅಪರಾಧಿಯ ಮನೆಯ ಬಾಗಿಲಿನ ಮೇಲೆ ಪೊಲೀಸರು ತಟ್ಟಿದಾಗ ಕೇಳಿಸುವಷ್ಟು ಧೃಡವಾದ ನಿಖರವಾದ ಸದ್ದು ಅನುರಣಿಸುತ್ತಿತ್ತು. ಹಾಗೆ ಅಷ್ಟು ಅಧಿಕಾರಯುತವಾಗಿ ನನ್ನ ಕೊಠಡಿಯ ಬಾಗಿಲು ತಟ್ಟುವ ಅಧಿಕಾರ ಇದ್ದದ್ದು ಕಾಮ್ರೇಡ್ ಆಲಿ ರೈಟರಿಗೆ ಮಾತ್ರ. ಅವರನ್ನು ಎಲ್ಲರೂ ಆಲಿ ರೈಟರು ಅಂತಲೇ ಕರೆಯುತ್ತಿದ್ದರೂ ನನಗೆ ಮಾತ್ರ ಅವರು ಕಾಮ್ರೇಡ್ ಆಲಿ ರೈಟರು. ಅವರಿಗೆ ನನ್ನ ಮೇಲೆ ಅಷ್ಟು ಅಧಿಕಾರ ಮತ್ತು ನನಗೆ ಅವರೆಂದರೆ ಅಷ್ಟು ಸಲುಗೆ. ಈ ಕಾಫಿ ತೋಟಗಳ, ಕರಿಮೆಣಸು ಬಳ್ಳಿಗಳ, ಏಲಕ್ಕಿ ಕಾಡುಗಳ, ಜಿಗಣೆ, ಕಾಡುಕೋಣ, ಮುಳ್ಳುಹಂದಿ, ಕಾಳಿಂಗ ಸರ್ಪಗಳ ಮಲೆ ಪ್ರದೇಶದಲ್ಲಿ ವರ್ಗ ಸಂಘರ್ಷ, ನಕಲಿ ಚುನಾವಣಾ ರಾಜಕೀಯ, ಟೊಳ್ಳು ಪ್ರಜಾಪ್ರಭುತ್ವ, ಕಾರ್ಮಿಕ ಕ್ರಾಂತಿ, ಧಮನಿತರ ರಾಜ್ಯ ಮುಂತಾದ ವಿಷಯಗಳ ಕುರಿತು ನನ್ನ ಜೊತೆ ಅಧಿಕಾರಯುತವಾಗಿ ಮಾತನಾಡಬಲ್ಲವರು ಅವರೊಬ್ಬರೇ ಅನ್ನುವುದು ಅವರ ಠೇಂಕಾರಕ್ಕೆ ಕಾರಣವಾಗಿತ್ತು. ಯಾವ ಠೇಂಕಾರವಾದರೇನು ಇವರು ದೂರದಿಂದ ನನಗೆ ಸೋದರಮಾವನಾಗಬೇಕಲ್ಲವೇ, ಇವರ ಮಗಳು ನನಗೆ ಮುಡಿಪಾಗಿದ್ದ ವಧುವಾಗಿದ್ದಳಲ್ಲವೇ ಎನ್ನುವುದು ನನಗೂ ಇವರ ಜೊತೆ ಇರುವ ಸಲುಗೆಗೆ ಕಾರಣ.

ಯಾವಾಗಲೂ ಆಗಿದ್ದರೆ ಕಾಮ್ರೇಡ್ ಆಲಿ ರೈಟರು ಬೆರಳಿಂದ ಬಾಗಿಲಿಗೆ ಬಡಿದವರು ಇನ್ನೊಂದು ಕೈಯಲ್ಲಿದ್ದ ಕೆಂಪು ಗುಲಾಬಿಯನ್ನು ನನ್ನ ಕೈಗಿತ್ತು 'ಲಾಲ್ ಸಲಾಂ' ಅನ್ನುವರು. ಅದು ಅವರು

